ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮುಳೆ ಬಾರದೆ ತೊಂದರೆಯಾಗಿರುವ ಗುಂಡ್ಲುಪೇಟೆ ತಾಲ್ಲೂಕಿನ ಬೇಗೂರು ಮತ್ತು ತೆರಕಾಣಾಂಬಿ ಪ್ರದೇಶದ ರೈತರುಗಳಿಗೆ ಭೂಕಂದಾಯವನ್ನು ಮನ್ನಾಮಾಡಲು ಸರ್ಕಾರದವರು ನಿಜವಾಗಿಯೂ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಂ. ಪಿ. ಕೃಷ್ಣಪ್ಪ.—ನಾನು ಆ ಪ್ರದೇಶಕ್ಕೆ ಹೋಗಿ ಅಲ್ಲಿ ನಿಜವಾದ ಪರಿಸ್ಥಿತಿ ಏನಿದೆ ಎಂಬುದನ್ನು ನೋಡಿಕೊಂಡು ಬಂದು ಅಲ್ಲಿ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

———

Hardships caused to the people of Hiremalali Village due to the digging of the Tunnel in their lands.

*Q.—37. Sri KUNDUR RUDRAPPA (Channagiri).—

Will the Government be pleased to state :—

(*a*) whether they are aware of the hardships caused to the people of Hiremalali Village, affected by the digging of the Tunnel in their lands ;

(*b*) whether the Chief Minister and the Public Works Minister have not assured these affected people during their tour in the said area, that they would be given reasonable compensation ;

(*c*) the action they have taken in this behalf ?

*A.—Sri VEERENDRA PATIL (Minister for Public Works) [on behalf of SRI S. NIJALINGAPPA (Chief Minister)].—

(*a*) Yes.

(*b*) Representations in this behalf have been made to Government.

(*c*) The matter is under examination.

ಶ್ರೀ ಕುಂದೂರು ರುದ್ರಪ್ಪ.—'ಗೊತ್ತಿದೆ' ಎಂದರೆ ಏನು ಗೊತ್ತಿದೆ, ಸ್ವಾಮಿ ? ಚಾನಲ್ ಡಿವಿಷನ್ನಿನವರು ಬಹಳ ಆಳವಾಗಿ ಚಾನಲ್ ತೆಗೆದಿರುವುದರಿಂದ ಆ ಗ್ರಾಮದವರಿಗೆ ಕುಡಿಯಲು ನೀರಿಲ್ಲದೆ ಚಾನಲ್ ಡಿವಿಷನ್ನಿನವರು ಸ್ಪೆಷಲ್ಲಾಗಿ ನೀರನ್ನು ನಷ್ಟೈ ಮಾಡುತ್ತಿದ್ದಾರೆ. ನನಗೂ ನಿಮಗೂ ಗೊತ್ತಿದ್ದರೂ ಈ ಸಭೆಗೆ ಗೊತ್ತಿಲ್ಲ. ಐದು ಸಾವಿರ ಪ್ರಜಾಸಂಖ್ಯೆ ಇರುವ ಗ್ರಾಮಕ್ಕೆ ಮುಂದೆ ಕುಡಿಯುವ ನೀರಿಗೆ ಗತಿ ಏನು ಸ್ವಾಮಿ ?

†ಶ್ರೀ ವೀರೇಂದ್ರ ಪಾಟೀಲ್.—ಯಾವ ಪ್ರಶ್ನೆ ಕೇಳಿದ್ದೀರೋ ಅದಕ್ಕೆ 'ಗೊತ್ತಿದೆ' ಎಂದು ಹೇಳಿದ್ದೇನೆ. ನಾನು ಮಾನ್ಯ ಸದಸ್ಯರ ಜೊತೆಗೆ ಹೋಗಿ ಅಲ್ಲಿ ನೋಡಿದ್ದೇನೆ. ಚಾನಲ್ ಕೂಡ ನೋಡಿದ್ದೇನೆ. ಚಾನಲ್ ತೆಗೆದದ್ದರಿಂದ ನೀರು ಬತ್ತಿಹೋಗಿದೆ. ಕುಡಿಯುವ ನೀರಿನ ಕಷ್ಟವಿದೆ. ಈಗ ತಾತ್ಕಾಲಿಕವಾಗಿ ಅಲ್ಲಿರುವ ಕಾರೋನಿಯಿಂದ ಬೋರ್‌ವೆಲ್ ನೀರನ್ನು ಕೊಡುತ್ತಿದೆ. ಆ ಊರನ್ನು ಬೇರೆ ಕಡೆಗೆ ಬದಲಾಯಿಸಬೇಕೆಂಬ ಉದ್ದೇಶವಿದೆ. ಅದಕ್ಕೆ ಅಲ್ಲಿರುವ ಎರಡು ಪಕ್ಷಗಳಲ್ಲಿ ಒಬ್ಬರು ಒಪ್ಪಿದರೆ ಇನ್ನೊಬ್ಬರು ಒಪ್ಪುವುದಿಲ್ಲ. ಊರಿನ ಎಲ್ಲ ಭಾಗಗಳಿಗೂ ಈ ಚಾನಲ್‌ನಿಂದ ತೊಂದರೆಯಾಗಿಲ್ಲ. ತೊಂದರೆಯಾಗಿರುವವರು ಬೇರೆಕಡೆ ಹೋಗಲು ಒಪ್ಪಿದರೆ, ತೊಂದರೆಯಾಗದೆ ಇರುವವರು ಒಪ್ಪುತ್ತಿಲ್ಲ. ಇದರಿಂದ ಊರನ್ನು ಬೇರೆಕಡೆ ಬದಲಾಯಿಸುವುದಕ್ಕೆ ಕಷ್ಟವಾಗಿದೆ. ಚಾನಲ್‌ನಲ್ಲಿ ಇನ್ನೂ ನೀರನ್ನು ಬಿಟ್ಟಿಲ್ಲ. ನೀರು ಬಿಟ್ಟಮೇಲೆ ಅದರ behaviour ಹೇಗಿರುತ್ತದೆ, seepage ನೀರಿನಿಂದ ಯಾವ ರೀತಿಯಾಗುತ್ತದೆ ಎಂದು ನೋಡಿಕೊಂಡು ಅನಂತರ shift ಮಾಡುವುದನ್ನು ಯೋಚಿಸಬೇಕಾಗುತ್ತದೆ. Shift ಮಾಡಬೇಕಾದರೆ ಕಾಂಪೆನ್‌ಸೇಷ್ ಕೊಡುವುದಕ್ಕೆ, ಪುನರ್ವಸತಿ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನೆಲ್ಲ ತೆಗೆದುಕೊಳ್ಳುತ್ತೇವೆ.

ಶ್ರೀ ಕುಂದೂರು ರುದ್ರಪ್ಪ.—ಬೇರೆ ಕಡೆಗೆ ಯಾರಾದರೂ ಹೋಗಲಿ, ಬಿಡಲಿ ಮುಂದೆ ಅವರಿಗೆ ನೀರಿನ ಗತಿ ಏನು ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಕುಡಿಯುವುದಕ್ಕೆ ನೀರಿನ ವ್ಯವಸ್ಥೆ ಮಾಡಿದ್ದೇವೆ. ಖಾಯಂ ವ್ಯವಸ್ಥೆ ಮಾಡಬೇಕಾದರೆ ಊರನ್ನು shift ಮಾಡಬೇಕು, ಎಂದು ಹೇಳಿದೆ. ಚಾನಲ್ ನೀರುಬಿಟ್ಟು ಅದರ behaviour ಎಲ್ಲ ತಿಳಿಯುಬೇಕಾದರೆ 2-3 ವರ್ಷ ಆಗುತ್ತದೆ. ಅವರಿಗೆ ಕುಡಿಯುವ ನೀರಿನ ಸೌಕರ್ಯವನ್ನು ಕೊಡುವಂಥಾದ್ದು ಸರ್ಕಾರದ ಜವಾಬ್ದಾರಿ. ಚಾನಲ್‌ನಲ್ಲಿ ನೀರು ಬಿಡುವುದಕ್ಕೆ ಮೊದಲೇ ಊರನ್ನು ಬೇರೆ ಕಡೆಗೆ ಬದಲಾಯಿಸಲು ವ್ಯವಸ್ಥೆ ಮಾಡಿದರೆ ಚಾನಲ್‌ನಲ್ಲಿ ನೀರು ಬಿಟ್ಟನಂತರ ಈಗಿನ ಸ್ಥಳದಲ್ಲಿಯೇ ಅನುಕೂಲತೆಗಳಿದ್ದು ಜನರಲ್ಲಿಯೇ ಇರುವುದಕ್ಕೆ ನಿರ್ಧರಿಸಿದರೆ ಆಗ ಬೇರೆಕಡೆ ಊರನ್ನು ಬದಲಾಯಿಸಲು ಮಾಡಿದ ಖರ್ಚೆಲ್ಲ ವ್ಯರ್ಥವಾಗುತ್ತದೆ.

ಶ್ರೀ ಕುಂದೂರು ರುದ್ರಪ್ಪ.—ಅಲ್ಲಿ ಅಡಕೆ ತೋಟಗಳೆಲ್ಲ ಒಣಗಿಹೋಗಿವೆ. ರೆವೆನ್ಯೂ ಮಂತ್ರಿಗಳು, ಮುಖ್ಯಮಂತ್ರಿಗಳು ಎಲ್ಲರೂ ನೋಡಿದ್ದಾರೆ. ಅಡಕೆ ಸಸಿಗಳಿಗೆ ಪರಿಹಾರ ಕೊಡುತ್ತೇವೆಂದು ಹೇಳಿದರು. ಇದುವರೆಗೂ ಕೊಟ್ಟಿಲ್ಲ. ಅಲ್ಲಿಗೆ ನೀರಿನ ಸೌಕರ್ಯವನ್ನೂ ಒದಗಿಸಿಲ್ಲ. ನೀರಿನ ಸೌಕರ್ಯದ ಕೆಲಸವನ್ನಾದರೂ ಪೂರ್ಯಸಬೇಡವೇ, ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಚಾನಲ್ ತೆಗೆದಿರುವುದರಿಂದ ಕೆಲವು ಭೂಮಿಗಳಿಗೆ ತೊಂದರೆಯಾಗಿದೆ ಎಂದು ನಾನು ಒಪ್ಪಿಕೊಂಡಿದ್ದೇನೆ. ಚಾನಲ್ ನೀರು ಬಿಟ್ಟು, ಅದರ behaviour ನೋಡಿದಮೇಲೆ ಖಾಯಂ ವ್ಯವಸ್ಥೆ ಮಾಡಬೇಕು. ತೊಂದರೆಯಾದವರಿಗೆ ಸರ್ಕಾರ ಪರಿಹಾರ ಕೊಡುವುದಕ್ಕೆ ಸಿದ್ಧವಾಗಿದೆ ಎಂದು ಹೇಳಿದ್ದೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈಗ ತಾತ್ಕಾಲಿಕವಾಗಿ ನೀರನ್ನು ಕೊಡುತ್ತಿದ್ದಾರೆ. ಅಲ್ಲರುವ ಸ್ಪೆಷಲ್ ಡಿವಿಜನ್ ಎರಡು ತಿಂಗಳಲ್ಲಿ ಕೆಲಸ ಪೂರ್ಯಸುತ್ತದೆ. ಆದು ಅಲ್ಲಿಂದ ಹೋದನಂತರ ಮುಂದೆ ನೀರಿನ ಪರಿಸ್ಥಿತಿ ಏನು ? ಸರ್ಕಾರ ತೀರ್ಮಾನ ಕೈಕೊಳ್ಳುವವರೆಗೂ ಅಲ್ಲಿನ ಜನತೆ ಏನು ಮಾಡಬೇಕು ಸ್ವಾಮಿ?

ಶ್ರೀ ವೀರೇಂದ್ರ ಪಾಟೀಲ್.—ಈಗ ಚಾನಲ್ ಡಿವಿಷ್ ಕಾರ್ಯಾನಿಯಲ್ಲರುವ ಬೋರ್‌ವೆಲ್‌ನಿಂದ ನೀರನ್ನು ಸಪ್ಲೈಮಾಡುತ್ತಿದ್ದೇವೆ. ಚಾನಲ್ ಡಿವಿಷ್ ಅಲ್ಲಿಂದ ಬೇರೆಕಡೆಗೆಹೋದರೂ ಆ ಗ್ರಾಮದಲ್ಲಿ ಜನ ಇರುವತನಕ ನೀರನ್ನು ಕೊಡುವಂಥ ಜವಾಬ್ದಾರಿ ಸರ್ಕಾರದ್ದಾಗಿದೆ. ಆದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನೆಲ್ಲ ತೆಗೆದುಕೊಂಡು ನೀರನ್ನು ಒದಗಿಸುತ್ತೇವೆ. ಕುಡಿಯುವುದಕ್ಕೆ ನೀರಿಲ್ಲ ಎನ್ನುವ ಪರಿಸ್ಥಿತಿಗೆ ತರುವುದಿಲ್ಲ ಎನ್ನುವ ಆಶ್ವಾಸನೆಯನ್ನು ಕೊಡುತ್ತಿದ್ದೇನೆ.

ಶ್ರೀ ಕುಂದೂರು ರುದ್ರಪ್ಪ.—ಅಡಿಕೆ ತೋಟಗಳು ಏನಾಗಿವೆ ಎಂಬುದನ್ನು ಕಣ್ಣಾರೆ ನೋಡಿದ್ದೀರಿ. ಚಾನಲ್‌ನಿಂದ ಅವುಗಳಿಗೆ ಉಪಯೋಗವಿಲ್ಲ. ಆದ್ದರಿಂದ ಅಡಿಕೆ ತೋಟಗಳವರಿಗೆ ಪರಿಹಾರ ಕೊಡುವ ವಿಚಾರದಲ್ಲಿ ತಕ್ಷಣ ವ್ಯವಸ್ಥೆ ಮಾಡುತ್ತಿರಾ?

ಶ್ರೀ ವೀರೇಂದ್ರ ಪಾಟೀಲ್.—ಆ ವಿಚಾರ ಈಗಾಗಲೇ ಸರ್ಕಾರದ ಪರಿಶೀಲನೆಯಲ್ಲಿದೆ. ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನೆಲ್ಲ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಕುಂದೂರು ರುದ್ರಪ್ಪ.—ಪರಿಹಾರ ಕೊಡುವ ವಿಚಾರದಲ್ಲಿ ಜಾಗ್ರತೆ ಕ್ರಮ ತೆಗೆದುಕೊಳ್ಳುತ್ತಿರಾ ಸ್ವಾಮಿ?

ಶ್ರೀ ವೀರೇಂದ್ರ ಪಾಟೀಲ್.—ಯಾವ ಯಾವದಕ್ಕೆ ಹೆಚ್ಚಿಗೆ ಬಾಧಕವಾಗಿದೆಯೋ ಅದರ ನಲುವಾಗಿ special rehabilitation officer ಇದ್ದಾರೆ, ಇದನ್ನು ವಿಚಾರಮಾಡಬೇಕೆಂದು ಅವರಿಗೆ ಇಗಾಗಲೇ ಹೇಳಿಬ್ಬೇವೆ. ಈ ಪ್ರಶ್ನೆಯನ್ನು ಪರಿಶೀಲಿಸಿ ಅದಷ್ಟು ಜಾಗ್ರತೆಯಾಗಿ ಒಂದು ನಿರ್ಣಯ ತೆಗೆದುಕೊಳ್ಳುತ್ತೇವೆ.

Construction of a High Level Causeway or Bridge across Sulekere Halla in Honnali Taluk.

*Q.—153. Sri D. PARAMESWARAPPA (Honnali).—

Will the Government be pleased to state :—

(*a*) whether the estimate for the construction of High Level Causeway or Bridge, across Sulekere halla, near Mukthenahalli Village, in Honnali Taluk, has been technically sanctioned;

(*b*) the date on which the work was taken up;

(*c*) if not, the reasons for not taking up the work;